# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 208/2024**

**CW-3**

**PW-2**

| | | |
|---|---|---|
| ಸಾಕ್ಷಿಯ ಹೆಸರು | ಃ | ಸುರೇಶ್ ಶೆಟ್ಟಿ |
| ತಂದೆ ಹೆಸರು | ಃ | ಸುಬ್ಬಯ್ಯ ಶೆಟ್ಟಿ |
| ಪ್ರಾಯ | ಃ | 52 ವರ್ಷ |
| ಉದ್ಯೋಗ | ಃ | ಕೃಷಿ |
| ವಾಸ | ಃ | ಶಿವಪುರ |

ದಿನಾಂಕ **: 01.08.2025** ರಂದು ಪಿಡಬ್ಲ್ಯೂ - 2 /ಸಿಡಬ್ಲ್ಯೂ - 3 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ಈಗ ನನಗೆ ತೋರಿಸಿದ ನಿಪಿ - 2 ಮತ್ತು 3 ರಲ್ಲಿನ ಸಹಿ ನನ್ನದಾಗಿರುತ್ತದೆ. ಅವುಗಳನ್ನು ಕ್ರಮವಾಗಿ ನಿಪಿ - 2(ಬಿ) ಮತ್ತು ನಿಪಿ - 3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಸುಮಾರು 1 ವರ್ಷದ ಹಿಂದೆ ಅಜೆಕಾರು

CC 208/2024
CW1
PW1

ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ - 2 ಮತ್ತು 3 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ, ಪೋಲೀಸರು ಹೇಳಿದಂತೆ ಸಹಿ ಮಾಡಿದ್ದೇನೆ. ನನ್ನ ಸಮಕ್ಷಮ ಯಾವುದೇ ಮಹಜರನ್ನು ಮಾಡಿ ಯಾವುದೇ ವಾಹನಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನನಗೆ ನಿಪಿ - 4 ಮತ್ತು 5 ನ್ನು ತೋರಿಸಿದ್ದು, ಅದರಲ್ಲಿ ನಾನು ಇದ್ದೇನೆ. ನಾನು ದೇವಸ್ಥಾನಕ್ಕೆ ಹೋದಾಗ ಪೋಲೀಸರು ನಮ್ಮನ್ನು ಕರೆಸಿ, ಸದರಿ ಫೋಟೋವನ್ನು ತೆಗೆಸಿರುತ್ತಾರೆ. ಅಪಘಾತ ಆಗಿದೆ ಎಂದು ಸದರಿ ಫೋಟೋ ತೆಗೆಯುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ಯಾವ ಅಪಘಾತ ಎಂದು ನನಗೆ ತಿಳಿದಿಲ್ಲ.

ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕು ಎಂದು ಹಿರಿಯ.ಸ.ಸ.ಅ. ರವರು ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ</u> ಹಿರಿಯ ಸ.ಸ.ಅ. ರವರಿಂದಃ

ದಿಃ 15.02.2024 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ 4 ರವರನ್ನು ಬೆಳಗ್ಗೆ 9 ಗಂಟೆಯ ಸಮಯದಲ್ಲಿ ಸ್ಥಳಕ್ಕೆ ಕರೆಸಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಹಾಜರಿದ್ದಂತಹ ಚಾಸಾ 1 ರವರು ಅಪಘಾತವಾದ ಸ್ಥಳವನ್ನು ತೋರಿಸಿದ ಮೇರೆಗೆ ಸ್ಥಳದಲ್ಲಿ ಬೆಳಗ್ಗೆ 9 ರಿಂದ 10 ಗಂಟೆಯವರೆಗೆ ನಿಪಿ - 2 ರಂತೆ

ಮಹಜರು ಮಾಡಿ, ನಿಪಿ - 3 ರಂತೆ ನಕಾಶೆಯನ್ನು ತಯಾರಿಸಿ, ನಮಗೆ ಓದಿ ಹೇಳಿ ನಂತರ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ - 4 ಮತ್ತು 5 ರಂತೆ ಸ್ಥಳದ ಮತ್ತು ವಾಹನದ ಫೋಟೋ ತೆಗೆದಿದ್ದಾರೆ ಎಂದರೆ ಸರಿಯಲ್ಲ. ನಿಪಿ - 2 ಮಹಜರು ಕಾಲಕ್ಕೆ ನಿಪಿ - 5 ರಲ್ಲಿ ಕಾಣುವ ವಾಹನವನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ಪರಿಚಯ ಇರುವುದಿಲ್ಲ. ಪೋಲೀಸರು ನನ್ನ ಸಮಕ್ಷಮ ಮಹಜರು ಮಾಡಿ, ನಿಪಿ - 5 ರಲ್ಲಿ ಕಾಣುವ ವಾಹನವನ್ನು ವಶಪಡಿಸಿಕೊಂಡಿದದ್ದರೂ ಸಹಾ, ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.